ಕಥೆ

# ಸಟ್ಟಾ




## ನಾಗರಾಜ ಕೋರಿ

ಕಲೆ: ಸಂತೋಷ್ ಸಸಿಹಿತ್ಲು


ಪ್ರತಿವರ್ಷ ಸವಾರಿ ಆಚರಿಸಿಕೊಳ್ಳುವ ದಾನಪ್ಪನ ಮಗ ಬೀರ ರಶೀದಸಾಬುನ ಮನೆಮುಂದ ಹಾದು ಹೋಗಿದ್ದೇ ತಡ, 'ಈಸಲ ಅದೆಂಗ ಸವಾರಿ ಮಾಡ್ಸಿಕೊಳ್ತಾನ ನೋಡೇಬಿಡ್ತಿನಿ.. ಪ್ರತಿವರ್ಷ ತನ್ ಸವಾರಿ ಮಾಡ್ಸಿಕೊಳ್ಳೋದ ಆಗ್ಯಾದ.. ನಮ್ ದೇವ್ರು ಬಗ್ಗೆ ಒಂದಿಷ್ಟನ ಕಾಜಿಲ್ಲ ಏನಿಲ್ಲ.. ಬರೀ ತಮ್ ದೇವ್ರದ ಹೇಳದು, ಹೊಗಳದು ಎಲ್ಲಾ ನಡದದ.. ಅದೇನು ಹೇಳಕಿ ಹೇಳ್ತನಂಥ ನೂರಾರು ಮಂದಿ ಬರ್ತಾರೇನೊ.. ಆತ ಹೇಳಿಕಿ ಹೇಳಿದಂಗ ಕುರಿಬ್ಯಾಟಿ ಮಾಡ್ತಾರ, ಅದಿದು ಮಾಡ್ತಾರ. ಮಂದಿಗೆ ಅದೇನು ಮೋಡಿ ಮಾಡ್ಯಾನೋ ಆ ದೇವ್ರಿಗೇ ಗೊತ್ತು. ನಮ್ ಮಂದಿದೇ ಮೌಲಾಲಿ ದೇವ್ರುನ ಹಿಡಿದು ಧಿಮಾಕ್ ಮಾಡ್ತಾನ. ಮುದಿ ಸೂಳಿಮಗ ಆಗ್ಯಾನ ಒಂದಿಷ್ಟನ ಮುಕುಳ್ಯಾಗ ಬುದ್ಧಿಲ್ಲ.. ಇವತ್ತು ನಾಳೆ ಸಾಯಂಗ ಆಗ್ಯಾನ ಸವಾರಿ ಹುಚ್ಚು ಬಿಡವಲ್ಲ. ಇನ್ನೆಲ್ಲಿ ನಮ್ನ ಬೆಳಸ್ತಾನ.' ಅಂತ ರಶೀದಸಾಬು ತನ್ನ ಬಹುಕಾಲದ ಹಳೇಭಕ್ತ ಅನುಕೂಲಪ್ಪನ ಕೂರಿಸಿಕೊಂಡು ಸಿಟ್ಟಲೆ ಹೇಳುತಿದ್ದ. ಹೊರಗ ಜಿಟಿಜಿಟಿ ಮಳಿಬಂದು ಊರೆಲ್ಲಾ ರಾಡೆಬ್ಬಿಸಿ ಮೆಲ್ಲಕ ಮೂರುದಿನ ಆಗಾಕ ಬಂದಿತ್ತು. ಊರಾಚೆಗಿರುವ ಹೊಳಿಮಾತ್ರ ಹರೇದ ಹುಡ್ಗಿಯಂಗ ತುಳುಕುತಿತ್ತು. ಊರು ಮಂದೆಲ್ಲಾ ದಾನಪ್ಪನ ದರ್ಗಾದ ಕಟ್ಟಿಗೆ ಹೊಳಿನೀರು ಬಂದಾವಂತ ಮಾತಾಡಿಕೊಳ್ಳತೊಡಗಿದ್ರು.

ಅವತ್ತು ಗುರುವಾರ ದಾನಪ್ಪನ ದೇವ್ರುವಾರ. ಸುತ್ತಲ ಊರುಗಳಿಂದ ಎಂದಿನಂತೆ ಹೇಳಿಕಿ ಕೇಳಾಕ ಹೆಣ್ಣುಗಂಡು, ರೋಗರುಜಿನವ್ರು, ಮುದೇವುಸದೇವು, ಕಾಡಿಕಿಪಾಡಿಕಿ ಇದ್ದವ್ರು ಅರುತಪ್ಪಿ ಬರತೊಡಗಿದ್ರು. ಬಂದವರು ಅಲ್ಲೇ ವಸ್ತಿದ್ದು, ರಾತ್ರೆಲ್ಲಾ ಭಜನಿಮಾಡಿ ನಿದ್ದೆಗೆಟ್ಟು, ಬೆಳಗ ಮುಂಜಾನೆ ಹೇಳಿಕಿ ಕೇಳಿಕೊಂಡೇ ಹೋಗುತಿದ್ರು. ಅವತ್ತಿನ ದಿನ ಭಕ್ತಾದಿಗಳಿಗೆ ದಾಸೋಹ ಕಾರ್ಯಕ್ರಮನೂ ಇರುತಿತ್ತು. ಹೇಳಿಕಿ ಹೇಳುವ ಜಾಗ ಹೊಳಿದಂಡಿ ಬಗಲ ದೇವ್ರು ದಫನ್ಆಗುವ ಜಾಗದಲ್ಲಿಯೇ ದರ್ಗಾ ಮಾಡಿಕೊಂಡಿದ್ದ. ಹೊಳಿಯಾಚೆಗಿರುವ ಕೂಡ್ಲೂರು, ಮ್ಯಾಳೂರು, ಕುಂಬ್ಳೂರು, ಮಾಟೂರು ಊರುಗಳು ಆಂಧ್ರಕ್ಕೆ ಸೇರಿದ್ದಾದರೂ ದಾನಪ್ಪನ ದೇವ್ರಿಗೆ ಹೋಗಿ ಬರೊದರಿಂದ ಹೆಣ್ಣುಗಂಡು ಕೊಡೊದು ತಗಳ್ಳದಂತ ಬೀಗುಸ್ತಾನ ಆಗಿದ್ವು. ಎಂಥ ಬರಗಾಲ, ಮಳಿಗಾಲ, ನೆರೆಹಾವಳಿಗೆ ಹೊಳಿ ತುಂಬಿದ್ರೂ ಹೇಳಿಕಿ ಕೇಳಾಕ ಹರಿಗೋಲು ಹಾಕಿಕೊಂಡು ಬರೋದು ಮಾತ್ರ ಬಿಡುತಿರಲಿಲ್ಲ.